**ಓ.ಎಸ್. ನಂಃ 160/2020**

**ಡಿ. ಡಬ್ಲ್ಯೂಃ 1**

**ದಿನಾಂಕ 22.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಕೆ.ಎಸ್.ಡಿ. ವಕೀಲರಿಂದಃ</u>**

1. ದಾವಾ ಆಸ್ತಿಗಳೆಲ್ಲವು ಸಹ ನನ್ನ ತಾತನಾದ ಕೆಂಪೇಗೌಡರಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೆಲವು ದಾವಾ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳಾಗಿದ್ದು, ಇನ್ನುಳಿದ ದಾವಾ ಆಸ್ತಿಗಳು ಮಾತ್ರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ದಾವಾ ಐಟಂ.ನಂ.1 ಮತ್ತು 2 ರ ಆಸ್ತಿಗಳು ನನ್ನ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಐಟಂ.ನಂ.3 ರಿಂದ 5 ರ ಆಸ್ತಿಗಳು ನನ್ನ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಐಟಂ.ನಂ.3 ರಿಂದ 5 ರ ಆಸ್ತಿಗಳನ್ನು ನನ್ನ ತಂದೆಯಾದ ಯೋಗಣ್ಣೇಗೌಡರವರು ಖರೀದಿಸಿದ ಆಸ್ತಿ ಆಗಿದ್ದು, ಅದು ನಮ್ಮ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

2. ದಾವಾ ಐಟಂ.ನಂ.3 ರ ಆಸ್ತಿಯನ್ನು ನನ್ನ ತಂದೆ ಕರೀಗೌಡ ಎನ್ನುವವರಿಂದ 1966 ರಲ್ಲಿ ಖರೀದಿಸಿರುತ್ತಾರೆ. ದಾವಾ ಐಟಂ.ನಂ.3 ರ ಆಸ್ತಿಯನ್ನು ನನ್ನ ತಂದೆ ಖರೀದಿಸಿದ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಐಟಂ.ನಂ.4 ಮತ್ತು 5 ರ ಆಸ್ತಿಗಳನ್ನು ನನ್ನ ತಂದೆ ಅಪ್ಪಸ್ವಾಮೀಗೌಡ ಎನ್ನುವವರಿಂದ ಖರೀದಿಸಿರುತ್ತಾರೆ. ದಾವಾ ಐಟಂ.ನಂ.4 ಮತ್ತು 5 ರ ಆಸ್ತಿಗಳನ್ನು ನನ್ನ ತಂದೆ ಖರೀದಿಸಿದ ಕ್ರಯ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆಯವರು ಸರಕಾರಿ ಉದ್ಯೋಗದಲ್ಲಿರಲಿಲ್ಲ ಎಂದರೆ ಸರಿ. ತಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ವ್ಯವಸಾಯ ಮಾಡಿ ಬಂದ ಆದಾಯದಿಂದ ನನ್ನ ತಂದೆ ಜೀವನ ಸಾಗಿಸುತ್ತಿದ್ದರು ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಿಂದ ದಾವಾ ಐಟಂ.ನಂ.3 ರಿಂದ 5 ರ ಆಸ್ತಿಗಳನ್ನು ನನ್ನ ತಂದೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಮತ್ತು ಅವರ 8 ಜನ ಮಕ್ಕಳು

ಕೂಲಿ ಕೆಲಸ ಮಾಡಿ ಬಂದ ಆದಾಯದಿಂದ ದಾವಾ ಐಟಂ.ನಂ.3 ರಿಂದ 5 ರ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

3. ದಾವಾ ಐಟಂ.ನಂ.1 ಮತ್ತು 2 ರ ಆಸ್ತಿಗಳು ನನ್ನ ತಂದೆಯವರಿಗೆ ನನ್ನ ತಾತನಾದ ಕೆಂಪೇಗೌಡರಿಂದ ಬಂದ ಆಸ್ತಿಗಳಾಗಿದ್ದು, ಮೂಲತಃ ದಾವಾ ಐಟಂ.ನಂ.1 ಮತ್ತು 2 ರ ಆಸ್ತಿಗಳನ್ನು ನನ್ನ ತಾತನಾದ ಕೆಂಪೇಗೌಡರು ಕೂಲಿ ಮಾಡಿ ಬಂದ ಆದಾಯದಿಂದ ಖರೀದಿಸಿದ್ದರು. ನನ್ನ ತಾತನಾದ ಕೆಂಪೇಗೌಡರ ಜೀವಿತಾವಧಿಯಲ್ಲಿಯೇ ದಾವಾ ಐಟಂ.ನಂ.1 ಮತ್ತು 2 ರ ಆಸ್ತಿಗಳು ನನ್ನ ತಂದೆಯವರ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ.

4. ನನ್ನ ತಾತನಾದ ಕೆಂಪೇಗೌಡರ ತಂದೆ ಅಂದರೆ ನನ್ನ ಮುತ್ತಾತನ ಹೆಸರು ಮರೀಗೌಡ ಅಂತ ಇರಬಹುದು ಆದರೆ ನನಗೆ ಸರಿಯಾಗಿ ಗೊತ್ತಿಲ್ಲ. ನನ್ನ ಮುತ್ತಾತನಿಗೆ ಒಟ್ಟು 3 ಜನ ಮಕ್ಕಳಿದ್ದರು. ನನ್ನ ತಾತನಾದ ಕೆಂಪೇಗೌಡರಿಗೆ ಒಟ್ಟು 6 ಜನ ಮಕ್ಕಳು. ನನ್ನ ತಾತನಾದ ಕೆಂಪೇಗೌಡರ ಆಸ್ತಿಗಳನ್ನೆಲ್ಲಾ ನನ್ನ ತಂದೆಯನ್ನೊಳಗೊಂಡಂತೆ ಅವರ 4 ಜನ ಗಂಡು ಮಕ್ಕಳು ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ. ನನ್ನ ತಾತನ ಆಸ್ತಿಗಳನ್ನು ನನ್ನ ತಂದೆ ಮತ್ತು ಅವರ ಸಹೋದರರು ನೊಂದಾಯಿತ ವಿಭಾಗ ಪತ್ರದ ಮೂಲಕ ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರರ ಮಧ್ಯೆ ಆದ ನೊಂದಾಯಿತ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

5. ನನಗೆ ಈಗ 59 ವರ್ಷ ವಯಸ್ಸಾಗಿರುತ್ತದೆ. ನನಗೆ ಒಬ್ಬ ಅಣ್ಣ ಮತ್ತು ಒಬ್ಬ ತಮ್ಮ ಇದ್ದಾರೆ. ದಾವಾ ಐಟಂ.ನಂ.3 ರಿಂದ 6 ರ ಆಸ್ತಿಗಳನ್ನು ಖರೀದಿಸಿರುತ್ತಾರೆ ಎನ್ನಲಾಗುವ ಕಾಲಕ್ಕೆ 3 ರಿಂದ 5 ನೇ ಪ್ರತಿವಾದಿಯರು ಕೇವಲ 5 ರಿಂದ 8 ವರ್ಷ ವಯಸ್ಸಿನವರಾಗಿದ್ದರು ಎಂದರೆ ಸಾಕ್ಷಿಯು ನಮ್ಮ ಸಹೋದರಿಯರು ಆಗ ವಯಸ್ಕರಾಗಿದ್ದು, ನಮ್ಮ ಅಣ್ಣ ಸಹ ಬದುಕಿದ್ದರು ಆದರೆ ಅವರು ಈಗ ಮರಣ ಹೊಂದಿರುತ್ತಾರೆ ಎಂದು ನುಡಿದಿರುತ್ತಾರೆ. ಎಷ್ಟನೇ ವಯಸ್ಸಿಗೆ ನನ್ನ ಅಣ್ಣ ಮರಣ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ.

6. ದಿನಾಂಕ 15.07.1998 ರಲ್ಲಿ ನಿಮ್ಮ ಮತ್ತು ವಾದಿಯ ತಾಯಿಯ ವಿವಾಹವಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ವಿವಾಹವಾದ ಕೇವಲ 4 ವರ್ಷಗಳ ಕಾಲ ಮಾತ್ರ ನಾನು ಮತ್ತು ವಾದಿಯ ತಾಯಿಯಾದ ಶೀಲಾರವರು ಅನ್ಯೋನ್ಯವಾಗಿ ವೈವಾಹಿಕ ಜೀವನ ನಡೆಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವವರೆಗೂ ನಾನು ಮತ್ತು ನನ್ನ ಹೆಂಡತಿ ಅನ್ಯೋನ್ಯವಾಗಿದ್ದೇವು ಎಂದು ಸಾಕ್ಷಿಯು ನುಡಿದಿರುತ್ತಾರೆ. 2004 ರಲ್ಲಿಯೇ ನನ್ನ ಮತ್ತು ನನ್ನ ಕುಟುಂಬದವರ ವಿರುದ್ಧ ವರದಕ್ಷಿಣಗೆ ಕಿರುಕುಳ ಪ್ರಕರಣವು ದಾಖಲಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದಾದನಂತರದಲ್ಲಿ ನ್ಯಾಯ ಪಂಚಾಯಿತಿಕೆ ಆಗಿ ನಾನು ಮತ್ತು ನನ್ನ ಹೆಂಡತಿ ಜೊತೆಯಾಗಿದ್ದವು ಎಂದು ಸ್ವತಃ ನುಡಿದಿರುತ್ತಾರೆ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**